ಪಾಠ -2

# ಪರಲೋಕದಲ್ಲಿ ಘರ್ಷಣೆ : ದೇವರು ನೇಮಿಸಿದ ಕ್ರಮಕ್ಕೆ ಅಡ್ಡಿ.

**ಮೂಲ** : ಬ್ರೂಸ್ ಎನ್ ಕ್ಯಾಮರಾನ್ ಅನುವಾದ : ಪಾಸ್ಟರ್ ಚೆಲುವರಾಜು.

**ಪೀಠಿಕೆ:-** ``ಪರಿಪೂರ್ಣ ವ್ಯವಸ್ಥೆಯನ್ನು ಪರಲೋಕದಲ್ಲಿ ಪಾಪ ಹೇಗೆ ಉತ್ಪತ್ತಿಯಾಯಿತು''? ಎಂದು ಕೆಲವರು ಕೇಳುತ್ತಾರೆ. ಈ ಪ್ರಶ್ನೆಗೆ ಮಾನವ ಮೆದಿಳು ಇರುವ ನನ್ನಿಂದ ಯಾವತ್ತಿಗೂ ಸ್ವಷ್ಟವಾದ ಉತ್ತರ ಕೊಡಲು ಅಸಾಧ್ಯವಾದ್ದರಿಂದ, ನಾನು, ``ಪರಿಪೂರ್ಣ ವ್ಯವಸ್ಥೆಯನ್ನು ಪರಲೋಕದಲ್ಲಿ ಪಾಪ ಉತ್ಪತ್ತಿ ಆಗಿದ್ದು ``ಏಕೆ?'' ಎಂಬ ಪ್ರಶ್ನೆಗೆ ಹೆಚ್ಚಿನ ಆದ್ಯತೆ ಕೊಡುತ್ತೇನೆ. ಈ ಪ್ರಶ್ನೆಗೆ ಉತ್ತರ ಕಂಡುಕೊಂಡರೆ, ಬಹುಶಃ, ನಮ್ಮ ಜೀವನದಲ್ಲಿ ಉದ್ಭವವಾಗಬಹುದಾದ ಪಾಪಗಳ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳಬಹುದು. ಪಾಪ ಏಕೆ ಉತ್ಪತ್ತಿಯಾಯಿತು ಎಂಬುದಕ್ಕೆ ಸತ್ಯವೇದ ಬಲವಾದ ಹಾಗೂ ಸಮಂಜಸವಾದ ಉತ್ತರಗಳನ್ನು ಕೊಡುತ್ತದೆ. ಪಾಪದ ಸಮಸ್ಯೆಗೆ ಮೂಲ ಕಾರಣ ಯಾವುದು ಎಂಬುದನ್ನು ಕಂಡುಕೊಂಡ ಮೇಲೆ, ಅದೇನೂ ಅಂಥಹ ದೊಡ್ಡ ಪಾಪವಲ್ಲ, ಇಂದಿನ ಲೋಕದಲ್ಲಿರುವ ಪಾಪಗಳಿಗೆ ಹೋಲಿಸಿದರೆ ಎಂದು ಹಗುರವಾಗಿ ತೇಲಿಸಿಬಿಡುವವರ ಕುರಿತು ನಿವೇನು ಚಿಂತನೆ ಮಾಡುತ್ತೀರಿ? ಸತ್ಯವೇದದ ಮುಖಾಂತರ ಪಾಪೋತ್ಪತ್ತಿಯನ್ನು ಕುರಿತು ಇನ್ನೂ ಹೆಚ್ಚಿನ ಹಾಗೂ ಆಳವಾದ ಅಧ್ಯಯನ ಮಾಡೋಣ.

I) ಪಾಪ ಆರಂಭವಾದದ್ದು ಹೇಗೆ?

1) ಯೆಶಾಯ 14:12-14ನ್ನು ಓದಿಕೊಳ್ಳಿರಿ. ಈ ವಾಕ್ಯಗಳು ಯಾರನ್ನು ಕುರಿತು ಮಾತನಾಡುತ್ತಿವೆ? [ಯೆಶಾಯ 14:3-4 ವಾಕ್ಯಗಳನ್ನು ಓದಿ ನೋಡುವಾಗ, ಇವು ಬಾಬೆಲಿನ ರಾಜನಿಗೆ ವಿರುದ್ಧವಾಗಿ ಬರೆದ ಮಾತುಗಳು ಎಂಬುದು ಸ್ವಷ್ಟವಾಗುತ್ತದೆ.

ಅ) ಯೆಶಾಯ 14:12ನ್ನು ಓದಿಕೊಳ್ಳಿರಿ. ಬಾಬೆಲಿನ ರಾಜನು ಯಾವತ್ತಿಗೂ ಪರಲೋಕದಲ್ಲಿ ಇದ್ದನೆನು? ಆತ ಇಲ್ಲದ್ದನಾದರೆ, ಇಲ್ಲಿನ ವಚನ, ``ಆಕಾಶದಿಂದ ಹೇಗೆ ಬಿದ್ದೆ!'' ಎಂದು ಹೇಳಿರುವುದಾದರೂ ಹೇಗೆ?

2) ಯೆಹೆ 28:12-17ನ್ನು ಓದಿರಿ. ಈ ವಾಕ್ಯಗಳು ಯಾರನ್ನು ಕುರಿತು ಮಾತನಾಡುತ್ತಿವೆ? [12ನೇ ವಚನ ``ತೂರಿನ ಅರಸನ ವಿಷಯದಲ್ಲಿ ಶೋಕಗೀತವನ್ನೆತ್ತು'']

ಅ) ಯೆಹೆ 28:13ನ್ನು ಓದಿನೋಡಿ : ತೂರಿನ ಅರಸನು ಏದೇನ್ ತೋಟದಲ್ಲಿ ಆದಾಮ ಮತ್ತು ಹವ್ವಳೊಂದಿಗೆ ವಾಸಮಾಡಿದ್ದನೇ?

ಆ) ಯೆಹೆ 28:14ನ್ನು ಓದಿನೋಡಿ: ತೂರಿನ ಅರಸನು, ಪರಲೋಕದಲ್ಲಿ ''ರೆಕ್ಕೆತೆರೆದು ನೆರಳು ಕೊಡುವ ಕೆರೂಬಿಯಾಗಿದ್ದನೇ'' [ಈತ ಎಲ್ಲಾ ಕಡೆ ಇರುತ್ತಾನೆ!]

3) ಪಾಪವು ಬಾಬಿಲೋನ್ ಮತ್ತು ತೂರಿನ ಅರಸರಿಂದ ಆರಂಭವಾಯಿತೇ? ನಮ್ಮ ಪಾಪೋತ್ಪತ್ತಿಯ ಅಧ್ಯಾಯನದಲ್ಲಿ ಬಾಬಿಲೋನ್ ಮತ್ತು ತೂರಿನ ಅರಸರ ಬಗ್ಗೆ ಅಧ್ಯಾಯನವನ್ನಾದರೂ ನಾವು ಏಕೆ ಮಾಡಬೇಕು? [ಇಲ್ಲಿ ಎರಡು ವಿಷಯಗಳನ್ನು ಗಮನಿಸೋಣ. ಮೊದಲಿಗೆ, ಸತ್ಯವೇದದ ಸಂಶೋಧಕರುಗಳು ಈ ಎರಡೂ ಸತ್ಯವೇದದ ವಾಕ್ಯಗಳನ್ನು ಸೈತಾನನಿಗೆ ಜೋಡಿಸುವುದು. ಸಂಪ್ರದಾಯವಾಗಿ ಬಂದು ಬಿಟ್ಟಿದೆ. ಕೆಲವರು ಈ ಭೂಲೋಕದ ರಾಜರುಗಳ ವಿಷಯವನ್ನು ಉಲ್ಲೇಖ ಮಾಡದೆಯೇ ನೇರವಾಗಿ ಸೈತಾನನ್ನು ಉಲ್ಲೇಖಿಸಿಬಿಡುತ್ತಾರೆ. ಹೀಗಿರುವಾಗ, ನಾವು ಯಾವ ಪ್ರಶ್ನೆಗಳನ್ನು ಕುರಿತು ಚರ್ಚೆ ಮಾಡಿದೆವೆಯೋ, ಆ ಚರ್ಚೆಗೆ ಆಸ್ಪದವಾದ ವಾಕ್ಯಗಳು ಸುಮ್ಮಸುಮ್ಮನೆ ಈ ಭೂಲೋಕದ ರಾಜರುಗಳನ್ನು ಉಲ್ಲೇಖಮಾಡಿಲ್ಲ. ಎರಡನೇಯದಾಗಿ, ಈ ಭೂಲೋಕದ ಸಿಂಹಾಸಾನಾಧಿಪತಿಗಳ ಹಿನ್ನೆಲೆಯಲ್ಲಿ ಇರುಬಹುದಾದ ಶಕ್ತಿಯೊಂದರ ಕತೆ ನಮ್ಮ ಗಮನ ಸೆಳೆಯುತ್ತವೆ. ಆ ಶಕ್ತಿ ಬೇರೆ ಯಾರೂ ಅಲ್ಲ : ಸೈತಾನನೇ ಆಗಿದ್ದಾನೆ].

ಅ) ಹೀಗೆ ಸುತ್ತಿಬಳಸಿ ಹೇಳುವುದೇಕೆ. ನೇರವಾಗಿ ''ಅವನೇ ಸೈತಾನ'' ಎಂದು ಸತ್ಯವೇದ ಹೇಳಬಹುದಿತ್ತಲ್ಲ? [ಸತ್ಯವೇದದಲ್ಲಿ ಅಡಕವಾಗಿರುವ ಆಳವಾದ ಅರ್ಥಗಳನ್ನು ಶೋಧಿಸಲೆಂಬುದೇ ದೇವರ ಉದ್ದೇಶವಾಗಿದೆ. ಪೇತ್ರನು ಸಹ ಇದೇ ಶೈಲಿಯಲ್ಲಿ ನಡೆದುಕೊಳ್ಳುವುದನ್ನು ಅ.ಕೃ 2:25-32ನ್ನು ಕೀರ್ತನೆ 16:9-11 ರೊಂದಿಗೆ ಹೋಲಿಸಿ, ಯೇಸುಸ್ವಾಮಿಯನ್ನು ಕುರಿತು ಎಷ್ಟು ಆಳವಾದ ಚಿಂತನೆಗಳು ಇಲ್ಲಿವೆಯೆಂಬುದನ್ನು ಅರ್ಥಮಾಡಿಕೊಳ್ಳಿರಿ. ದಾವೀದನ ಬೆನ್ನಹಿಂದೆ ಯೇಸುಸ್ವಾಮಿಯೆಂಬ ಶಕ್ತಿಯಿದ್ದದಂತೆಯೇ, ಬಾಬಿಲೋನ್ ಮತ್ತು ತೂರಿನ ಅರಸರ ಬೆನ್ನಹಿಂದೆ ಸೈತಾನನೆಂಬ ಶಕ್ತಿಯಿರುವುದನ್ನು ಗಮನಿಸಿರಿ]

4) ಯೆಶಾಯ ಮತ್ತು ಯೆಹೆಜ್ಕೇಲನ ಪ್ರವಾದನೆಯ ಮಾತುಗಳು ಸೈತಾನನ್ನು ಕುರಿತು ಸೂಚಿಸುವಾಗ, ಖಂಡಿತ ಈ ವಾಕ್ಯಗಳನ್ನು ಬಹಳ ಎಚ್ಚರಿಕೆಯಿಂದ ಗಮನಿಸಬೇಕಾಗಿದೆ. ಯೆಶಾಯ 14:12 ಮತ್ತು ಯೆಹೆ 28:12-14 ವಾಕ್ಯಗಳನ್ನು ಹೋಲಿಸಿನೋಡಿರಿ. ಸೈತಾನನಿಗೆ ಪರಲೋಕದಲ್ಲಿದ್ದ ಸ್ಥಾನಮಾನವೇನು? ಯೆಹೆ 28:14 ಸೈತಾನ ''ನೆರಳು ಕೊಡುವ ಕೆರೂಬಿಯಾಗಿದ್ದನು'' ಎಂದು ಹೇಳುತ್ತದೆ. ಸಿಂಹಾಸನಕ್ಕೆ ಅಷ್ಟು ಸಮಿಪನಾಗಿದ್ದರಿಂದ ಆತನಿಗೆ ಪರಲೋಕದಲ್ಲಿ ದೊಡ್ಡ ಸ್ಥಾನ ಇದ್ದಿರಲಿಕ್ಕೂ ಸಾಕು. ಆತ ಸಿಂಹಾಸನವಿರುವ ಮಂದಿರದಲ್ಲಿ ಕೆಲಸ ಮಾಡುತ್ತಿದ್ದ.

ಅ) ಸೈತಾನ ಸೃಷ್ಟಿಸಲ್ಪಟ್ಟ ಜೀವಿಯಾಗಿದ್ದನೇ? [ಹೌದು ಯೆಹೆ 28:13]

ಆ) ಸೈತಾನ ಎಂಥಹವನು? ಯೆಹೆ 28 : 12ರಲ್ಲಿ ಅವನು ಸರ್ವಸುಲಕ್ಷಣ ಶಿರೋಮಣಿ, ಪೂರ್ಣಜ್ಞಾನಿ ಪರಿಪೂರ್ಣ ಸುಂದರ ಎಂದು ಹೇಳುತ್ತದೆ. ನಿಜಕ್ಕೂ ಪರಲೋಕದಲ್ಲಿ ಆತನೊಬ್ಬ ವಿಶೇಷ ವ್ಯಕ್ತಿಯಾಗಿದ್ದಿರಬೇಕು, ಏಕೆಂದರೆ ಯೆಶಾಯ 14:12, ಆತನನ್ನು ''ಉದಯ ನಕ್ಷತ್ರವೇ'' ''ಬೆಳ್ಳಿಯೇ'' ಎಂದು ಕರೆದಿದೆ.

## II. ಹವ್ವಳ ಶೋಧನೆ:

1) ಆದಿಕಾಂಡ 3:4-6ನ್ನು ಓದಿಕೊಳ್ಳಿ. ಮನುಷ್ಯ ಪಾಪದ ಕುಳಿಗೆ ಹೇಗೆ ಬಿದ್ದನೆಂಬುದನ್ನು ಮುಂದಿನವಾರ ಕಲಿಯೋಣ ಆದಾಗ್ಯು, ಭೂಲೋಕದಲ್ಲಿ ಪಾಪ ಹೇಗುಂಟಾಯಿತು ಎಂಬುದನ್ನು ಅರ್ಥಮಾಡಿಕೊಂಡರೆ, ಅದು ಪರಲೋಕದಲ್ಲಿ ಪಾಪ ಹೇಗುಂಟಾಯಿತು ಎಂಬುದನ್ನು ಅರಿಯಲು ನಮಗೆ ಕೆಲವು ಸೂಚನೆಗಳನ್ನು ಕೊಡಬಹುದು. ಹವ್ವಳ ಸೈತಾನನ ಶೋಧನೆಯ ಅಂತರಾಳದಲ್ಲಿ ಅಡಗಿರುವುದೇನು? [ಅಹಂಕಾರ-ಅದರಲ್ಲೂ ವಿಶೇಷವಾಗಿ ದೇವರಂಥಾಗಬೇಕು ಎಂಬ ಅಹಂಭಾವ]

ಅ) ಸೈತಾನ ಹವ್ವಳೊಂದಿಗೆ ಹೀಗೆ ನಡೆದುಕೊಳ್ಳಲು ಕಾರಣವೇನು? [ನನಗನ್ನಿಸುತ್ತದೆ, ಈಗ ಸೈತಾನನಿಗೆ ತನ್ನ ಪಾಪದ ಸ್ವರೂಪವೇನು ಎಂಬುದನ್ನು ಗುರುತಿಸಿರಬೇಕು. ತನ್ನ ಅಹಂಭಾವದಿಂದ ತಾನು ಪಾಪಮಾಡಿರಬೇಕಾದರೆ, ಈ ಮಾನವರಲ್ಲಿ ಅಹಂಭಾವವನ್ನೇಕೆ ಹುಟ್ಟಿಹಾಕಬಾರದು ಎಂಬ ಆಲೋಚನೆ ಆತನದು].

ಆ) ನಿಮ್ಮ ಸಭೆ ಅಹಂಕಾರಿಗಳನ್ನು ಶಿಸ್ತುಪಡಿಸಿರುವುದುಂಟೇ? ಅಥವಾ ಅಹಂಕಾರಿ ಗಳನ್ನು ನಿಮ್ಮ ಸಭೆಯ ನಾಯಕರನ್ನಾಗಿ ನೇಮಿಸುತ್ತೀರಿಯೇ?

2) ಈಗಲೂ ನಾವು ಅಹಂಭಾವ ಮೂಲದ ಪಾಪವನ್ನು ಗುರುತಿಸಲು ಸಾಧ್ಯವೇ? ಕೆಲವು ಉದಾಹರಣೆಗಳನ್ನು ನೀಡಿರಿ? ನಿಮ್ಮ ಜೀವನದಲ್ಲಿಯೂ ಇಂಥಹ ಅಹಂಭಾವಗಳಿರುವುದನ್ನು ಗಮನಿಸಿದ್ದೀರಾ?

ಅ) ಸತ್ಯವೇದ ಈ ವಿಷಯವನ್ನು ಕುರಿತು ಏನು ಹೇಳುತ್ತದೆ, ಎಂದು ನನಗೆ ಗೊತ್ತು ಆದರೆ ಅಂಥಹ ಸಲಹೆಗಳನ್ನು ತೆಗೆದುಕೊಳ್ಳುವುದನ್ನು ನಾನು ಮಿರಿ ನಿಂತಿದ್ದೇನೆ. ಏಕೆಂದರೆ ನಾನು ಬಹಳ ಸುಧಾರಿಸಿದ್ದೇನೆ ಎಂದು ಆಧುನಿಕಗೊಂಡಿದ್ದೇನೆ.

3) ನಾನ್ನಿನ್ನೂ ಚಿಕ್ಕ ಹುಡುಗನಾಗಿರುವಾಗ, ಆಭರಣಗಳನ್ನು ಧರಿಸುವುದನ್ನು ಕುರಿತು ವಾಗ್ವಾದ ನಡೆಯುತ್ತಿತ್ತು. ನಾನು ಸಭೆಯ ಹಿರಿಕನಾದಾಗ, ನಾನು ಚರ್ಚ್ ಬೋರ್ಡ್‌ಗೆ (ಸಭಾ ಸಮಿತಿಗೆ) ಹಾಜರಾಗಬೇಕಾದರೆ, ನನ್ನ ಮದುವೆಯ ಸಂಕೇತವಾಗಿದ್ದ ಬೆರಳುಂಗುರವನ್ನು ಕಳೆದಿಟ್ಟು ಬರುವಂತೆ ಹೇಳುತ್ತಿದ್ದರು. ನನಗಿಂತಲೂ ಸತ್ಯದಲ್ಲಿ ಬಲಹೀನರಾಗಿರುವ ಸಹೋದರರುಗಳ ನಂಬಿಕೆಗೆ ದಕ್ಕೆ ಬರಬಾರದೆಂದು

ಬಿಚ್ಚಿಟ್ಟು ಬರುತ್ತಿದೆ. (ರೋಮಾ 14). ಯೆಹೆ 28:13ನ್ನು ಮತ್ತೊಮ್ಮೆ ಓದಿನೋಡಿ. ಸೈತಾನನಿಗೆ ಈ ಎಲ್ಲಾ "ಆಭರಣ"ಗಳನ್ನು ಕೊಟ್ಟವರ್ಯಾರು? [ದೇವರೇ ಇದ್ದಿರಬಹುದು.]

ಅ) ಇದರ ಪರಿಣಾಮವೇನಾಯಿತು? [ಆತನ ಅಹಂಕಾರ ಹೆಚ್ಚಿತು]

ಆ) ಸಭೆಯಲ್ಲಿ ಆಭರಣ ಕುರಿತ ಜಗಳ ಈಗ ನಿಂತಿದೆ. ಏಕೆಂದರೆ ಆಭರಣಕ್ಕೆ ಜಯವಾಗಿದೆ. ಅಂಥಹ ಜಗಳಗಳು ಅರ್ಥಹೀನ ಎಂದು ಈಗ ಅನ್ನಿಸುತ್ತಿದೆಯೇ? [ನೀನು ಇನ್ನೊಬ್ಬರಿಗಿಂತ ಹೆಚ್ಚು ಅಂದವಾಗಿ ಕಾಣಿಸುತ್ತೀಯ ಎಂತಲೂ ಅಥವಾ ಇನ್ನೊಬ್ಬರಿಗಿಂತ ಹೆಚ್ಚು ಶ್ರೀಮಂತ ಎಂದು ತೋರಿಸುವದಕ್ಕಾಗಿ ಆಭರಣ ಧರಿಸಿಕೊಂಡಿದ್ದರೆ. ಇದು ನಿಜಕ್ಕೂ ತುಂಬಾ ಮುಖ್ಯವಾದ ವಿಷಯ ಅಹಂಭಾವವೆಂಬ ಪಾಪದ ಒಂದು ಭಾಗಶಃ ಹಾಗೂ ಮರಣಾಂತಿಕ ಪಾಪವಿದು.]

ಇ) ಇನ್ನೂ ನಮ್ಮ ಕಾರು, ಮನೆ ಮತ್ತು ನಾವು ಹಾಕುವ ಬಟ್ಟೆಗಳನ್ನು ಕುರಿತು ಮಾತನಾಡೋಣವೇ? ಅಥವಾ ಈ ಒಂದು ತರಗತಿಯ ಚರ್ಚೆಗೆ ಇಷ್ಟು ವಿಷಯ ಸಾಕೇ?

4) ಪ್ರತಿಭಟನೆ

ಅ) ಪ್ರಕಟಣೆ 12:7-9ನ್ನು ಓದಿಕೊಳ್ಳಿರಿ: ಭೂಮಿಗೆ ದಬ್ಬಿದ ಉದಾಹರಣೆ ಇಲ್ಲದೇ ಸೈತಾನನ ಅಹಂಕಾರ ಅವನನ್ನು ಎಲ್ಲಿಗೆ ಕೊಂಡೊಯಿತು? [ಮೊದಲು ತನ್ನ ಪ್ರತಿಭಟನೆ ಹಾಗೂ ವರ್ಗದ ದೃಷ್ಟಿಕೋನಕ್ಕೆ ಇತರೇ ದೇವದೂತರುಗಳನ್ನು ಪರಿವರ್ತಿಸಲಾರಂಭಿಸಿದನು. ತನ್ನ ಕಡೆ ಸಾಕಷ್ಟು ಮಂದಿ ಇದ್ದಾರೆ ಎಂದುಕೊಂಡೊಡನೆ, ದೇವರೊಂದಿಗೆ ನೇರವಾಗಿ ಹೋರಾಟಕ್ಕಿಳಿದ.]

(i) ಸೈತಾನನ ಉದ್ದೇಶವೇನಾಗಿತ್ತು? [ವಿಶ್ವದ ಅಧಿಪತಿಯಾಗಬೇಕು ಎಂಬುದೇ ಅವನ ಉದ್ದೇಶ – ಯೆಶಾಯ 14:13-14]

(ii) ಕೇವಲ ಸೃಷ್ಟಿಸಲ್ಪಟ್ಟ ಕುದ್ರಜೀವಿಯೊಂದು ಹಾಗೆ ನೆನೆಸಬಹುದೇ? [ಅವನಿಗೆ ದೇವರಿಗಿಂತ ಹೆಚ್ಚು ಜ್ಞಾನವಿತ್ತೇ? ಈವತ್ತು ಜನ ಹಾಗೆ ಇರುವುದನ್ನು ನೋಡುತ್ತೇವಲ್ಲವೇ? ನಿಮ್ಮ ಸ್ವಂತ ಜೀವನವನ್ನೂ ಒಮ್ಮೆ ಅವಲೋಕಿಸಿ ನೋಡಿರಿ.

ಆ) ಯೋಬ 1:8-11ನ್ನು ಓದಿಕೊಳ್ಳಿ. ದೇವರ ಹತ್ತಿರ ಸೈತಾನನ ದೂರೇನು? [ತಮಗೇನು ಬೇಕೊ ಅದನ್ನು ದೇವರು ಕೊಡುತ್ತಿರುವುದರಿಂದ ಜನ ಆತನನ್ನು ಆರಾಧಿಸುತ್ತಾರೆ.]

i) ಇದೊಂದು ತಪ್ಪಾದ ಮನೋಭಾವವೇ? ಈ ಪ್ರಶ್ನೆಗೆ ನೀವು ಉತ್ತರ ಕೊಡುವ ಮುನ್ನ ಒಮ್ಮೆ **ಧರ್ಮೋಪದೇಶಕಾಂಡ 28ನ್ನು ಓದಿನೋಡಿ. ಜೊತೆಗೆ ಮಲಾಕಿ 3:10 –12,**

ಇ) ಸೈತಾನನ ಯೋಬನಲ್ಲಿದ್ದುದನ್ನೆಲ್ಲಾ ಕಸಿದುಕೊಂಡ. ಅದಕ್ಕೆ ಯೋಬನ ಪ್ರತಿಕ್ರಿಯೆ ಏನಾಗಿತ್ತು ಎಂಬುದನ್ನು ಯೋಬ 1:20–22ರಲ್ಲಿ ಓದಿನೋಡಿರಿ. ಯೋಬನಿಗೆ ಯಾವದು ಪಾಪವಾಗಿತ್ತು ಎಂದು ಸತ್ಯವೇದ ಸೂಚಿಸುತ್ತದೆ? [ಯೋಬನಲ್ಲಿ ಇದ್ದದ್ದನ್ನೆಲ್ಲಾ ಕಸಿದುಕೊಂಡು ದೇವರು ತಪ್ಪು ಮಾಡಿದರೇ?]

ಈ) ಈವುಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳೋಣ. ದೇವರು ನಮಗೆ ಬೇಕಾದವುಗಳನ್ನು ಹೇಳುತ್ತಾರೆ. ಅದನ್ನು ಸೈತಾನ, ''ಅವರು ತಮಗೆ ಬೇಡಿದ್ದೆಲ್ಲಾ ಸಿಗುವುದರಿಂದ ದೇವರನ್ನು ಆರಾಧಿಸುತ್ತಾರೆ'' ಎನ್ನುತ್ತಾನೆ. ಯೋಬ ಎಲ್ಲವನ್ನೂ ಕಳೆದುಕೊಂಡಾಗ, ದೇವರು ಏನೋ ತಪ್ಪುಮಾಡಿಬಿಟ್ಟಾರೆ ಎಂದು ಪರಲೋಕವೇ ಮೂಕವಿಸ್ಮಿತವಾಗಿ ಬಿಡುತ್ತದೆ. ಇದರಿಂದ ನಾವು ಏನು ಪಾಠ ಕಲಿಯುತ್ತೇವೆಯೋ ಅದೇ ಯೋಬನ ಪರೀಕ್ಷೆಯಾಗಿದೆಯೇ? [ಆತ ದೇವರನ್ನು ನಂಬಿದ್ದನು.]

## 5) ಪಕ್ಷಗಳ ಆರಿಸಿಕೊಳ್ಳುವಿಕೆ

ಅ) ಯಾವಾಗಲೂ ವಾಗ್ವಾದ, ಚರ್ಚೆ ಮತ್ತು ಪ್ರತಿಭಟನೆಗಳನ್ನೇ ಎಲ್ಲಾ ಸಮಯದಲ್ಲೂ ಕಾಣುತ್ತಿದ್ದೇವೆ. ಸತ್ಯವೇದ ದೇವರ ದೃಷ್ಟಿಯ ಮೇರೆಗೆ ಬರೆಯಲ್ಪಟ್ಟದ್ದು. ಜನ ಹೇಳುವಂತೆ, ''ಗೆದ್ದವರು ಇತಿಹಾಸ ಬರೆಯುತ್ತಾರೆ''. ದೇವರೇ ಸರಿ, ಸೈತಾನ ತಪ್ಪು ಎಂದು ನಾವು ಹೇಳುವುದು ಹೇಗೆ? ಸೈತಾನನ ಅಹಂಕಾರ, ಸತ್ಯವನ್ನೇ ಸಾಧಿಸುವ ಸಾಮರ್ಥ್ಯದಿಂದ ಕೂಡಿರಲು ಸಾಧ್ಯವಿತ್ತೇ?

ಆ) ಆದಿಕಾಂಡ 4:1–8ನ್ನು ಓದಿಕೊಳ್ಳಿ. ದೇವರನ್ನು ಬಿಟ್ಟು, ಆದಾಮ ಮತ್ತು ಹವ್ವಳು ಸೈತಾನನ್ನು ಆರಿಸಿಕೊಂಡ ನಂತರ ನಡೆದ ಒಂದು ಭೀಕರ ಘಟನೆ. ಕಾಯಿನನ ಅವಿಧೇಯತೆಯ ವಿಷಯದಲ್ಲಿ ದೇವರು ಹೇಗೆ ನಡೆದುಕೊಂಡರು?

i) ವಿಧೇಯತೆಯಿಂದ ನಡೆದುಕೊಳ್ಳುತ್ತಿದ್ದ ಹೇಬೆಲನ ಜೊತೆ ಕಾಯಿನ ನಡೆದುಕೊಂಡ ರೀತಿ ಎಂಥಹದು? [ಎರಡು ಪಕ್ಷಗಳ ನಡುವಿನ ಭಿನ್ನತೆಯನ್ನು ಇದು ತೋರಿಸಿಕೊಡುತ್ತದೆ. ದೇವರು ಕಾಯಿನನ ಜೊತೆ ಸಕಾರಣದಿಂದ ನಡೆದುಕೊಂಡಿದ್ದಾರೆ. ಕೋಪ ಮತ್ತು ಅಹಂಕಾರದಿಂದ ಕಾಯಿನ, ಹೇಬೇಲನನ್ನು ಕೊಂದಿದ್ದಾನೆ. ಸೈತಾನನ ಕೈ ಮೇಲೆದ್ದಾಗ, ಸಾವು ಅದನ್ನು ಹಿಂಬಾಲಿಸುತ್ತದೆ. ಯೇಸುಸ್ವಾಮಿ ನಮ್ಮ ಸ್ಥಾನದಲ್ಲಿ ಮಡಿದು, ಆ ಹಿಂದಿನ ವ್ಯವಸ್ಥೆಯನ್ನು ಮುರಿದಿದ್ದಾರೆ.]

ಇ) ಮತ್ತಾಯ 22:37–40ನ್ನು ಓದಿರಿ. ದೇವರ ರಾಜ್ಯದ ಪ್ರಾಥಮಿಕ ನಿಯಮವನ್ನು ಕುರಿತು. ಸ್ವತಃ ದೇವರೇ ನೀಡಿರುವ ವಿವರಣೆ ಏನು? [ಪ್ರೀತಿ, ಮೃತ್ಯವಿಲ್ಲ, ಕೋಪವಿಲ್ಲ, ಅಹಂಕಾರವಿಲ್ಲ]

ಈ) ಪರಲೋಕ ಮತ್ತು ಭೂಲೋಕಗಳಲ್ಲಿ ನಡೆಯುತ್ತಿರುವ ಹೋರಾಟವನ್ನು ಕಂಡಿರಾ ನನ್ನ ಸ್ನೇಹಿತರೇ? ಅಹಂಕಾರವೆಂದರೆ ನಿಮ್ಮ ಮೇಲೆ ನೀವೇ ಇಡುವ ಭರವಸೆ. ಅಹಂಕಾರದ ಸೈತಾನ ತಾನು ದೇವರಿಗಿಂತ ಉತ್ತಮ ಕೆಲಸಮಾಡಬಲ್ಲೆ ಎಂದುಕೊಂಡ. ಆತ ದೇವರ ಮೇಲೆ ಭರವಸೆಯಿಡಲಿಲ್ಲ. ದೇವರು ತನ್ನಿಂದ ಜ್ಞಾನವನ್ನು ಮುಚ್ಚಿಟ್ಟರು ಎಂದು ದೂರುವ ಹವ್ವಳು, ದೇವರ ಮೇಲೆ ಭರವಸೆ ಇಡಲಿಲ್ಲ. ಆಕೆಯ ಅಹಂಕಾರ ತಾನೂ ದೇವರಂಥಾಗಬೇಕು ಎಂಬಂತ್ತಿತ್ತು. ಯೋಬ ಎಲ್ಲಾ ಕಳೆದುಕೊಂಡಾಗ, ನಿಜವಾದ ಸಂಗತಿಯೆಂದರೆ, ಆತ ಇನ್ನೂ ದೇವರ ಮೇಲೆ ಭರವಸೆ ಇಡುವನೇ ಎಂಬುದಾಗಿತ್ತು. ಅಹಂಕಾರದ ವಿರುದ್ಧ ಭರವಸೆ. ಕೆಲಸದ ವಿರುದ್ಧ ನಂಬಿಕೆ. ದೇವರ ರಾಜ್ಯ ಪ್ರೀತಿ ಮತ್ತು ನಂಬಿಕೆಯ ರಾಜ್ಯ. ನಿಮಗೆ ಏನೇ ಆದರೂ ದೇವರ ಮೇಲೆ ಭರವಸೆ ಇಡುವಿರಾ?

**6) ಮುಂದಿನ ವಾರ : ಪಾಪದಲ್ಲಿ ಬೀಳುವಿಕೆ.**